ಅಸಲು ದಾವಾ ಸಂಖ್ಯೆ - 168/2015
ಡಿಡಬ್ಲ್ಯೂ - 01
ದಿನಾಂಕಃ 28.07.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ - ಶ್ರೀ ಎನ್ ಎಸ್ ಪಿ ವಕೀಲರಿಂದ.**

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ದಿನಾಂಕಃ 24.03.2012 ರ 50 ರೂಪಾಯಿಯ ಸ್ಟಾಂಪ್ ಗಳ ಮೇಲೆ ಬರೆದ ಎರಡು ಹಕ್ಕು ಬಿಟ್ಟ ಪತ್ರ ಮತ್ತು ದಿನಾಂಕಃ 21.07.2000 ರ 20 ರೂಪಾಯಿ ಚಾಪಾ ಕಾಗದದ ಮೇಲೆ ಬರೆದಿರುವ ಒಂದು ಹಕ್ಕು ಬಿಟ್ಟ ಪತ್ರ ಹಾಜರುಪಡಿಸಿದ್ದು, ಸದರಿ ಹಕ್ಕು ಬಿಟ್ಟ ಪತ್ರಗಳ ಮೇಲಿನ ಬಾಕಿ ಸ್ಟಾಂಪ ಮೊತ್ತ ಮತ್ತು ದಂಡದ ಮೊತ್ತ ದಿಃ 23.06.2023 ರಂದು ತುಂಬಿದ್ದರಿಂದ ಸದರಿ ಮೂರು ಹಕ್ಕು ಬಿಟ್ಟ ಪತ್ರಗಳನ್ನು ಕಲಂ 149 ನೊಂದಣಿ ಕಾಯ್ದೆ ಅಡಿ ನಿಡಿ-18 ರಿಂದ 20 ಅಂತಾ ಗುರುತಿಸಲಾಯಿತು.

ದಿಃ 24.03.2012 ರಂದು ಆಸ್ತಿ ನಂ.210 ಕ್ಕೆ ಸಂಬಂಧಪಟ್ಟಂತೆ ಬರೆದುಕೊಟ್ಟ ಹಕ್ಕು ಬಿಟ್ಟ ಪತ್ರದಲ್ಲಿ ಚಮನಸಾಬ ಇತನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಡಿ-18 ಎ ಎಂದು ಗುರುತಿಸಲಾಯಿತು. ಅದರಂತೆ ಅದೇ ದಿನ ಆಸ್ತಿ ನಂ.210 ಪೂರ್ವ ದಿಕ್ಕಿನ 01 ಗುಂಟೆ 08 ಆಣೆ ಜಾಗಕ್ಕೆ ಸಂಬಂಧಿಸಿದ ಹಕ್ಕು ಬಿಟ್ಟ ಪತ್ರದ ಮೇಲೆ ಇರುವ ಚಮನಸಾಬ ಪೀರಸಾಬ ನದಾಫ ಇತನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಡಿ-19 ಎ ಎಂದು ಗುರುತಿಸಲಾಯಿತು. ಅದರಂತೆ ಸದರಿ ಚಮನಸಾಬ ಪೀರಸಾಬ ನದಾಫ ನನ್ನ ಅಣ್ಣನಿಗೆ ದಿಃ 21.07.2000 ರಂದು ಬರೆದುಕೊಟ್ಟಿರುವ ಹಕ್ಕು ಬಿಟ್ಟ ಪತ್ರದ ಮೇಲಿರುವ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಡಿ-20 ಎ ಎಂದು ಗುರುತಿಸಲಾಯಿತು.

ಸದರಿ ನಿಡಿ-18 ಮತ್ತು 19 ಗಳನ್ನು ಬರೆದುಕೊಡುವಾಗ ಲಾಡಸಾಬ ನದಾಫ, ಭೀಮಣ್ಣ ವಗ್ಗನವರ, ಮೈಲಾರಪ್ಪ ತಳವಾರ ಇದ್ದರು. ಮೈಲಾರಪ್ಪ ತಳವಾರ ತೀರಿಕೊಂಡಿರುತ್ತಾನೆ. ಲಾಡಸಾಬ ನದಾಫ, ಭೀಮಣ್ಣ ವಗ್ಗನವರ ಜೀವಂತ ಇರುತ್ತಾರೆ.

ಆದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು